# ಪೆಂಟಯ್ಯನ ಅಂಗಿ

ಕನ್ನಡದ ಖ್ಯಾತ ಕವಿ ಕೆ.ವಿ. ತಿರುಮಲೇಶ್ ಅವರ ಒಂದು ಕವಿತೆಯ ಶೀರ್ಷಿಕೆ 'ಪೆಂಟಯ್ಯನ ಅಂಗಿ'. ಈ ಕವಿತೆಯ ನಾಯಕ ಪೆಂಟಯ್ಯ ಇದ್ದಿಲು ಅಂಗಡಿಯಲ್ಲಿ ದಿನವಿಡೀ ದುಡಿಯುವ ಆಳು. ಇದ್ದಿಲು ಮೂಟೆ ಹೊತ್ತು ಗಿರಾಕಿಗಳ ಮನೆಗೆ ತಲುಪಿಸುವುದು ಆತನ ದಿನ ನಿತ್ಯದ ಕೆಲಸ. ಅವನಲ್ಲಿದ್ದುದು ಒಂದೇ ಒಂದು ಅಂಗಿ. ಇದ್ದಿಲು ಹೊತ್ತೊಯ್ಯುವಾಗಲೂ ಅದೇ; ನಿದ್ದೆ ಮಾಡುವಾಗಲೂ ಅದೇ; ಸಂಜೆ ಪೇಟೆಯತ್ತ ಹೋಗುವಾಗಲೂ ಅದೇ! ಇದ್ದಿಲಿನ ಸಂಪರ್ಕದಿಂದಾಗಿ ಅದು ತನ್ನ ಮೂಲ ಬಣ್ಣವನ್ನು ಕಳೆದುಕೊಂಡು, ಕರಿಯ ಕೊಚ್ಚೆ ನೀರಲ್ಲಿ ಅದ್ದಿ ತೆಗೆದಂತೆ ಕಾಣುತ್ತಿತ್ತು. ಇಂಥ ಕಪ್ಪು ಕೊಳಕು ಅಂಗಿಯನ್ನು ಸದಾ ಧರಿಸಬೇಕಾಗಿದ್ದುದಕ್ಕೆ ಪೆಂಟಯ್ಯನಿಗೆ ವಿಪರೀತ ಬೇಜಾರು. ಹೇಗೋ ಅಷ್ಟಿಷ್ಟು ಉಳಿತಾಯ ಮಾಡಿ, ತನ್ನ ಬಹುದಿನದ ಬಯಕೆಯಾಗಿದ್ದ ಒಂದು ಬಿಳಿ ಅಂಗಿಯನ್ನು ಖರೀದಿಸಿದಾಗ ಅವನಲ್ಲಿ ತುಸು ಜೀವನೋತ್ಸಾಹ ಪುಟಿಯಿತು. ಹೊಸ ಅಂಗಿ ಧರಿಸಿ ಒಂದು ಸಿನೆಮಾ ನೋಡುವ ಆಸೆಯಾಯಿತು. ಒಂದು ಸಂಜೆ ಗರಿಗರಿಯಾಗಿ ಇಸ್ತ್ರಿ ಮಾಡಿದ್ದ ಹೊಸ ಅಂಗಿ ಹಾಕಿಕೊಂಡ ಪೆಂಟಯ್ಯ ಸಿನೆಮಾ ನೋಡಲು ಹೊರಟೇಬಿಟ್ಟ. ಈ ಉತ್ಸಾಹದಲ್ಲಿ ಪೊಲೀಸ್ ಅದಿಕಾರಿಯೊಬ್ಬನ ಮನೆಗೆ ಇದ್ದಿಲು ಮೂಟೆ ತಲುಪಿಸುವ ಕೆಲಸವಿದ್ದುದು ಆತನಿಗೆ ಮರತೇ ಹೋಗಿತ್ತು. ಪೆಂಟಯ್ಯ ಸಿನೆಮಾಕ್ಕೆ ಹೊರಟಾಗಲೇ ಆ ಪೊಲೀಸ್ ಅಧಿಕಾರಿ ಧುತ್ತೆಂದು ಎದುರಾಗಬೇಕೇ? ಪೆಂಟಯ್ಯನ ಸಿನೆಮಾ ನೋಡುವ ಬಯಕೆ ಕಮರಿ ಹೋಯಿತು. ಆತ ತನ್ನ ನಿತ್ಯ ಕಾಯಕಕ್ಕೆ ಹಿಂತಿರುಗಲೇ ಬೇಕಾಯಿತು. 'ಅಂದಿನಿಂದ ಪೆಂಟಯ್ಯನ ಬಿಳಿ ಅಂಗಿ ಬಿಳಿಯಂಗಿಯಾಗಿರಲಿಲ್ಲ' ಎಂದು ಕವಿತೆ ಮುಕ್ತಾಯವಾಗುತ್ತದೆ.

ಬದುಕು ನಮ್ಮೊಂದಿಗೆ ಕಣ್ಣುಮುಚ್ಚಾಲೆಯಾಡುವುದೇ ಹೀಗೆ. ನಮ್ಮಲ್ಲಿ ಬಹಪಾಲು ಮಂದಿ ಪೆಂಟಯ್ಯನಂತೆ 'ಆಶೆಯೆಂಬ ತಳವೊಡೆದ ದೋಣಿಯಲ್ಲಿ ದೂರ ತೀರಯಾನ' ಮಾಡುವವರು. ನಮ್ಮ ಇತಿಮಿತಿಯಲ್ಲಿಯೇ ಜೀವನದ ಸಂತೋಷವನ್ನು ಅನುಭವಿಸ ಹೊರಡುವ ಕ್ಷಣದಲ್ಲಿ ಯಾವುದೋ ಅನಿರೀಕ್ಷಿತ ತಿರುವು ಕಾಣಿಸಿಕೊಂಡು, ಆ ಸಂತಸದ ಕ್ಷಣ ನಮ್ಮಿಂದ ಜಾರಿ ಹೋಗುತ್ತದೆ. ಸೂರ್ಯ ಮುಳುಗಿದ ನಂತರ ಮೊಗ್ಗಾದ ತಾವರೆಯಲ್ಲಿ ಸೆರೆಸಿಕ್ಕ ದುಂಬಿ 'ಬೆಳಗಾದಾಗ ತಾವರೆ ಅರಳುತ್ತದೆ, ನಾನು ಹೊರಬರುತ್ತೇನೆ' ಎಂದು ಕನಸು ಕಾಣುತ್ತಿರುವಾಗಲೇ, ಆನೆಯೊಂದು ತಾವರೆಯ ಗಿಡವನ್ನೇ ಬುಡಸಹಿತ ಕಿತ್ತು ಹಾಕಿತಂತೆ! ಪೆಂಟಯ್ಯನಂಥವರು ಅನುಭವಿಸುವ ಆಶಾಭಂಗ ಇಂಥದೇ. ನಿರಾಶೆಯ ಪ್ರಪಾತಕ್ಕೆ ಏಕಾಏಕಿ ತಳ್ಳುವ ಕಠೋರ ಕ್ಷಣಗಳು ಎಲ್ಲರ ಬದುಕಿನಲ್ಲೂ ಎದುರಾಗುತ್ತಲೇ ಇರುತ್ತವೆ.

ಇಂಥ ಸಂದರ್ಭಗಳಲ್ಲಿ ಮನುಷ್ಯರು ಹೇಗೆ ಪ್ರತಿಕ್ರಿಯಿಸುತ್ತಾರೆಂಬುದನ್ನು ಗಮನಿಸಬೇಕು. ಬಹಳಷ್ಟು ಮಂದಿ 'ಇದು ನಮ್ಮ ಹಣೆ ಬರೆಹ, ಪೂರ್ವಾರ್ಜಿತ ಕರ್ಮಫಲ' ಎಂದು ನಿಟ್ಟುಸಿರು ಬಿಟ್ಟು, ಖಿನ್ನತೆಯತ್ತ ಸಾಗುತ್ತಾರೆ. ಇನ್ನು ಕೆಲವರು ಬದುಕಿನಲ್ಲಿ ಬಂದುದೆಲ್ಲವನ್ನೂ ಸ್ವೀಕರಿಸುತ್ತಾರೆ; ಆದರೆ ಯಾವುದೇ ಬದಲಾವಣೆಗೂ ಪ್ರಯತ್ನಿಸದೇ ತಟಸ್ಥರಾಗಿರುತ್ತಾರೆ. ಈ ಎರಡು ಗುಂಪಿನ ಜನರೇ ಅಧಿಕ ಸಂಖ್ಯೆಯಲ್ಲಿರುವವರು. ಕೆಲವೇ ಕೆಲವು ಮಂದಿ ಎಂಥದೇ ಕಷ್ಟ, ಅಡಚಣೆ, ಸೋಲು, ನಿರಾಶೆ ಎದುರಾದರೂ ಧೃತಿಗೆಡದೆ, ಮತ್ತೆ ಮತ್ತೆ ಪ್ರಯತ್ನಿಸಿ, ತಮ್ಮ ಗುರಿಯನ್ನು ಮುಟ್ಟುತ್ತಾರೆ. ಅವರು ವಿಧಿ ವಾದಿಗಳಲ್ಲ; ಪೌರುಷವಾದಿಗಳು; ಸೋಲುಗಳನ್ನು ಗೆಲುವಿನ ಮೆಟ್ಟಿಲುಗಳಾಗಿ ಪರಿವರ್ತಿಸಿಕೊಳ್ಳುವ ಧೀರರು! 'ಛಲವೇ ಬಲ' ಎಂಬುದು ಅವರ ಧ್ಯೇಯ ಸೂತ್ರ. ತೀವ್ರ ಹಂಬಲ, ತೀವ್ರ ಅಭೀಪ್ಸೆ, ತೀವ್ರ ಶ್ರದ್ಧೆಯಿಂದ ಕೂಡಿದ ಪರಿಶ್ರಮ– ಇವುಗಳಿದ್ದರೆ ಅಸಾಧ್ಯವೂ ಸಾಧ್ಯವಾಗುತ್ತದೆ ಎಂಬ ದೃಢ ನಂಬಿಕೆ ಅವರದು. ಜಗತ್ತಿನ ಇತಿಹಾಸದಲ್ಲಿ ಇಂಥ ವಿರಳ ಧೀರರನ್ನು ವಿಜ್ಞಾನ, ಕಲೆ, ಸಾಹಿತ್ಯ, ಇತ್ಯಾದಿ ಎಲ್ಲಾ ಕ್ಷೇತ್ರಗಳಲ್ಲೂ ಕಾಣಬಹುದು. ಅವರ ಯಶಸ್ಸಿಗೆ ಬಹು ಮುಖ್ಯ ಕಾರಣವೆಂದರೆ ಅವರಿಗೆ ಅವರ ಗುರಿ ಏನೆಂಬುದು ಅತ್ಯಂತ ಸ್ಪಷ್ಟವಾಗಿ ತಿಳಿದಿತ್ತು. 'ಗುರಿಯಷ್ಟೇ ಅದನ್ನು ಹೊಂದುವ ಮಾರ್ಗದ ಕಡೆಗೂ ಗಮನ ಕೊಡಬೇಕೆಂಬುದು ನಾನು ಕಲಿತ ಅತ್ಯಂತ ಮಹತ್ವದ ಪಾಠ' ಎನ್ನುತ್ತಿದ್ದರು ಸ್ವಾಮಿ ವಿವೇಕಾನಂದರು. ತನ್ನ ಯಶಸ್ಸಿಗೆ ಪ್ರತಿಭೆಯ ಪಾಲು ಒಂದು ಅಂಶವಾದರೆ, ಪರಿಶ್ರಮದ ಪಾಲು ತೊಂಬತ್ತೊಂಬತ್ತು ಎಂದು ಹೇಳುತ್ತಿದ್ದ ಥಾಮಸ್ ಆಲ್ವಾ ಎಡಿಸನ್ ಅಂಥವರು ನಿಶ್ಚಿತ ಗುರಿಯನ್ನರಿಸಿಕೊಂಡು, ಸೋಲುಗಳಿಂದ ಕುಗ್ಗದೇ ಯಶಸ್ಸು ಗಳಿಸಿದ ಪ್ರಯತ್ನಶೀಲರು! 'Success often comes to those, who dare and act, it seldom goes to the timid' ಎಂಬ ಹೇಳಿಕೆಗೆ ಅತ್ಯುತ್ತಮ ನಿದರ್ಶನದಂತೆ ಬದುಕಿ, ಸಾಧಿಸಿದವರು!

■ ವೈನತೇಯ

## ಮಾತೇ ಮುತ್ತು

★ ಹೊಟ್ಟೆಪಾಡಿಗೆ ಮಾಡುವ ಹಾದರ ಏನೂ ಅಲ್ಲ! ಹಣದ ದಾಹಕ್ಕೆ ಅಥವಾ ಬಡ್ಡಿಗೆ ಮಾಡುವ ಹಾದರ ಅಪರಾಧ. ಭ್ರಷ್ಟಾಚಾರ ಅದಕ್ಕಿಂತ ದೊಡ್ಡ ಅಪರಾಧ.
–ಅನುಭವಾಮೃತ

★ ಸಾಯುವ ಮನುಜರಾದ ರಾಜ, ಮಹಾರಾಜರುಗಳನ್ನು ಇಂದ್ರ ಚಂದ್ರರೆಂದು ನಾನು ಹೊಗಳಲಾರೆ. ನಿತ್ಯಸ್ವರೂಪಿಯಾದ ಶಿವನಿಗೆ, ಅಮರತ್ವವನ್ನು ಪಡೆದ ಶಿವಶರಣರಿಗೆ– ನನ್ನ ನಾಲಗೆ ಮೀಸಲು.
–ಹರಿಹರ

★ ಕೆಲವರಿಗೆ ಯಶಸ್ಸು ಸಿಕ್ಕುತ್ತದೆ, ಆದರೆ ಅದಕ್ಕೆ ಪಾತ್ರರು ಬೇರೆಯವರು ಆಗಿರುತ್ತಾರೆ.
–ಅ.ನ.ಕೃಷ್ಣರಾವ್

★ ನನ್ನ ಬಳಿ ಎಲ್ಲವೂ ಇದೆ ಎಂದು ಹೇಳುವವನಲ್ಲಿ ಏನೂ ಇರುವುದಿಲ್ಲ. ನನ್ನಲ್ಲಿ ಏನೂ ಇಲ್ಲ ಎಂದು ಹೇಳುವವನ ಬಳಿ ಬಹಳಷ್ಟು ಇರುತ್ತದೆ.
–ಬೈಬಲ್

★ ಕೆಟ್ಟ ನಡತೆಯವರನ್ನು ನೋಡಿ ನನಗೆ ಆಶ್ಚರ್ಯವಾಗುವುದಿಲ್ಲ. ಆದರೆ ಅಂತಹವರು ನಾಚಿಕೆಯಿಂದ ತಲೆ ತಗ್ಗಿಸದಿರುವುದು ನನಗೆ ಆಶ್ಚರ್ಯ.
–ಶೇಖ್ ಸಾದಿ

★ ಅಧಿಕಾರದ ಮದ, ದುಡ್ಡಿನ ದುರಾಸೆ ನಮ್ಮನ್ನು ಅನ್ಯಾಯ, ದ್ರೋಹ, ಕಪಟ, ಅನೀತಿಗೆ ಇಳಿಸಿಬಿಡುತ್ತದೆ.
–ವಿನೋಬಾ ಬಾವೆ

★ ಅಂಧಕಾರದಲ್ಲಿ ದೀಪವನ್ನು ಹುಡುಕುತ್ತೇವೆ ಅಲ್ಲವೇ? ಅಂತೆಯೇ ಅವರಿಗೆ ಬೇಕಾದಾಗ ಮಾತ್ರ ಜನ ನಿಮ್ಮನ್ನು ನೆನಪು ಮಾಡಿಕೊಳ್ಳುತ್ತಾರೆ. ಆದ್ದರಿಂದ ಬೇಸರ ಮಾಡಿಕೊಳ್ಳುವ ಅಗತ್ಯ ಇಲ್ಲ.
–ಬೇಕನ್

★ ಸಂವೇದನಾಶೀಲನಾಗು– ಆದರೆ ಮನಸ್ಸು ನಿರ್ಮಲವಾಗಿರಲಿ, ಪವಿತ್ರವಾಗಿರಲಿ.
–ರಾಮಕೃಷ್ಣ ಪರಮಹಂಸ

★ ಮನೆಯವರ ಮನಸ್ಸು ಅರಿಯದೆ, ಮನೆಯ ಜವಾಬ್ದಾರಿಯನ್ನು ಹೊರದೆ, ಮನೆಯ ಯಜಮಾನ ಗೌರವ ಪಡೆಯಲಾರ. ಅಧಿಕಾರ ಚಲಾಯಿಸಿ ಯಜಮಾನವಾಗುವುದು ಸಾಧ್ಯವಿಲ್ಲ.
–ಕೃಷ್ಣಮೂರ್ತಿ ಪುರಾಣಿಕ

★ ಕೃತಿ ಕೆಟ್ಟದಿದ್ದು, ಮನಸ್ಸು ಸದಾ ಕೆಡಕು ಬಯಸುತ್ತಿದ್ದು– ಸಜ್ಜನರಂತೆ ಮುಖವಾಡ ಧರಿಸುತ್ತಿರುವವರ ಜನರ ಬಗ್ಗೆ ಎಚ್ಚರದಿಂದಿರಬೇಕು.
–ದ.ರಾ.ಬೇಂದ್ರೆ

★ ವಿಪತ್ತುಗಳ ಅಭೇದ್ಯ ಗೋಡೆಯಲ್ಲಿ ದಾರಿ ತೋರಿಸುವಂಥದು ಚಾರಿತ್ರ್ಯ ನಿರ್ಮಾಣ.
–ಸ್ವಾಮಿ ವಿವೇಕಾನಂದ

★ ಧೈರ್ಯ, ಧರ್ಮ, ಮಿತ್ರ ಮತ್ತು ಪತ್ನಿ– ಈ ನಾಲ್ಕೂ ವಿಷಯಗಳ ಪರೀಕ್ಷೆ ಕಷ್ಟಗಳು ಬಂದಾಗ ಗೊತ್ತಾಗುತ್ತದೆ.
–ತುಲಸಿದಾಸ